JUNE 08, 2025

# AKASHAVANI - DHARWAD
# PRADESH SAMACHARA (KANNADA) 07.05 A.M.

**ಮುಖ್ಯಾಂಶಗಳು**

- **ಬೆಂಗಳೂರಿನ, ಭಾರತೀಯ ತೋಟಗಾರಿಕೆ** ಸಂಶೋಧನಾ ಕೇಂದ್ರದಲ್ಲಿ, ಇಂದು, ವಿಕಸಿತ ಕೃಷಿ ಸಂಕಲ್ಪ ಅಭಿಯಾನ; ಶಿವರಾಜ್‌ಸಿಂಗ್ ಚೌವ್ಹಾಣ್ ಭಾಗಿ.
- **ಮಹಾತ್ಮ ಗಾಂಧಿ ನರೇಗಾ ಯೋಜನೆ;** ಗುಲಾಬಿ ಕೃಷಿ ಕೈಗೊಂಡು, ಯಶಸ್ವಿಯಾದ, ಕೋಲಾರ ರೈತ, ರಾಘವೇಂದ್ರ.
- **ವಿಶ್ವ ಆಹಾರ ಸುರಕ್ಷತಾ ದಿನ;** ಆರೋಗ್ಯಕರ ಆಹಾರ ಸೇವನೆಗೆ ಆದ್ಯತೆ ನೀಡಲು, ಜೆ.ಪಿ. ನಡ್ಡಾ ಕರೆ.
- **ಕೇಂದ್ರ ಸರ್ಕಾರಕ್ಕೆ 11 ವರ್ಷಗಳು ಪೂರ್ಣ;** ಹಣಕಾಸು ಸುಧಾರಣೆಗಳ ಮೂಲಕ, ಮಧ್ಯಮ ವರ್ಗದ ಸಬಲೀಕರಣ, ಸಾಧನೆ.

<><><>

**ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿಸಂಭವಿಸಿದ,** ಕಾಲ್ತುಳಿತ ದುರಂತದಲ್ಲಿ ಮೃತಪಟ್ಟವರ ಕುಟುಂಬಗಳಿಗೆ, ಈ ಮೊದಲು ಘೋಷಿಸಿದ್ದ ಪರಿಹಾರ, ತಲಾ 10 ಲಕ್ಷದಿಂದ 25 ಲಕ್ಷ ರೂಪಾಯಿಗಳಿಗೆ ಹೆಚ್ಚಿಸಲಾಗಿದೆ ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ, ಎಕ್ಸ್ ಮಾಧ್ಯಮದಲ್ಲಿ ಪ್ರಕಟಿಸಿದ್ದಾರೆ. ತಮ್ಮವರನ್ನು ಕಳೆದುಕೊಂಡು ನೊಂದಿರುವ ಕುಟುಂಬಗಳು, ಆರ್ಥಿಕ ಸಮಸ್ಯೆಗಳಿಂದಾಗಿ, ಇನ್ನ ್ಟ ಸಂಕ ್ಟಕ್ಕೆ ಒಳಗಾಗದಿರಲಿ ಎನ್ನುವುದು, ತಮ್ಮ ಸರ್ಕಾರದ ಕಾಳಜಿ ಎಂದು, ಮುಖ್ಯಮಂತ್ರಿ ತಿಳಿಸಿದ್ದಾರೆ.

<><><>

**ಕೇಂದ್ರದ ಕೃಷಿ ಮತ್ತು ರೈತ ಕಲ್ಯಾಣ** ಖಾತೆ ಸಚಿವ, ಶಿವರಾಜ್ ಸಿಂಗ್ ಚೌವ್ಹಾಣ್ ಇಂದು ಬೆಂಗಳೂರಿಗೆ ಆಗಮಿಸಲಿದ್ದಾರೆ. ಬೆಂಗಳೂರು ಹೆಸರಘಟ್ಟದ, ಭಾರತೀಯ ತೋಟಗಾರಿಕೆ ಸಂಶೋಧನಾ ಕೇಂದ್ರದಲ್ಲಿ ಆಯೋಜಿತ, ವಿಕಸಿತ ಕೃಷಿ ಸಂಕಲ್ಪ ರಾಷ್ಟ್ರೀಯ ಅಭಿಯಾನ ಕಾರ್ಯಕ್ರಮದಲ್ಲಿ, ಅವರು ಭಾಗವಹಿಸಲಿದ್ದಾರೆ. ಈ ಸಂದರ್ಭದಲ್ಲಿ ಸಚಿವರು, ಕರ್ನಾಟಕದ ಕೃಷಿ ಸ್ಥಿತಿಗತಿ ಚರ್ಚೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ಬಳಿಕ ರೈತರೊಂದಿಗೆ ಸಂವಾದ ನಡೆಸಲಿದ್ದಾರೆ.

<><><>

**ವಿಕಸಿತ ಕೃಷಿ ಸಂಕಲ್ಪ ರಾಷ್ಟ್ರೀಯ ಅಭಿಯಾನದಡಿ,** ವಿಜ್ಞಾನಿಗಳ ನಡೆ, ರೈತರ ಕಡೆ ಧ್ಯೇಯದೊಂದಿಗೆ, ಕೊಪ್ಪಳ ಜಿಲ್ಲೆ ಅಳವಂಡಿ ಹೋಬಳಿಯ, ಹಲಗೇರಿ ಗ್ರಾಮದ ರೈತರೊಂದಿಗೆ, ಕೃಷಿ, ತೋಟಗಾರಿಕೆ ಹಾಗೂ ಪಶು ಸಂಗೋಪನಾ ಇಲಾಖೆ ಅಧಿಕಾರಿಗಳು, ಸಂವಾದ ನಡೆಸಿದರು. ಗಂಗಾವತಿ ಗಾಂಧಿ ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥ, ರಾಘವೇಂದ್ರ ಎಲಿಗಾರ, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ.

<><><>

**ವಿಕಸಿತ ಕೃಷಿ ಸಂಕಲ್ಪ ರಾಷ್ಟ್ರೀಯ ಅಭಿಯಾನದಲ್ಲಿ,** ಹಲಗೇರಿ ಗ್ರಾಮದ ಮಹಿಳಾ ಸ್ವಸಹಾಯ ಸಂಘದ, ಕೃಷಿಕ ಮಹಿಳೆಯರೊಂದಿಗೆ ಪಾಲ್ಗೊಂಡಿದ್ದ, ಕೃಷಿ ಸಖಿ ಶ್ರೀದೇವಿ, ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

**ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ** ಯೋಜನೆ ಅಡಿ, ಸಬ್ಸಿಡಿ ಪಡೆದು, ಗುಲಾಬಿ ಕೃಷಿ ಕೈಗೊಂಡು, ಆರ್ಥಿಕವಾಗಿ ಸಬಲರಾಗಿದ್ದಾರೆ, ಕೋಲಾರ ಜಿಲ್ಲೆ, ಅರಾಭಿಕೊತ್ತನೂರು ಗ್ರಾಮ ಪಂಚಾಯ್ತಿ ವ್ಯಾಪ್ತಿಯ, ಚಿಕ್ಕಯ್ಯೂರು ಗ್ರಾಮದ ಕೃಷಿಕ ರಾಘವೇಂದ್ರ. ಈ ಮೊದಲು, ಚಾಲಕರಾಗಿ, ಗಾರೆ ಕೂಲಿ ಕಾರ್ಮಿಕರಾಗಿ ಅವರು ಕೆಲಸ ಮಾಡುತ್ತಿದ್ದರು. ತಮ್ಮ 20 ಗುಂಟೆ ಜಮೀನಿನಲ್ಲಿ, ಗುಲಾಬಿ ಕೃಷಿ ಕೈಗೊಂಡು, ತಿಂಗಳಿಗೆ 30 ಸಾವಿರ ರೂಪಾಯಿ ಆದಾಯ ಗಳಿಸುತ್ತಿದ್ದಾರೆ. ಪ್ರದೇಶ ಸಮಾಚಾರಕ್ಕಾಗಿ, ಕೃಷಿಕ ರಾಘವೇಂದ್ರ ತಮ್ಮ ಅನುಭವ ಹಂಚಿಕೊಂಡಿದ್ದಾರೆ.

<><><>

**ಮಧುಮೇಹ ಹಾಗೂ ಸ್ಥೂಲ ಕಾಯದ** ಸಮಸ್ಯೆ ಪರಿಹರಿಸಲು, ಶಿಸ್ತುಬದ್ಧ ಆಹಾರ ಪ್ರಮುಖ ಪಾತ್ರ ವಹಿಸುತ್ತದೆ. ನಗರ ಪ್ರದೇಶಗಳಲ್ಲಿ ಸ್ಥೂಲ ಕಾಯದ ಸಮಸ್ಯೆ, ಶೇಕಡ 39 ದಶಾಂಶ 6 ರಷ್ಟು ಹೆಚ್ಚಳವಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ, ಈ ಪ್ರಮಾಣ, ಶೇಕಡ 23 ದಶಾಂಶ 1 ರಷ್ಟಿದೆ ಎಂದು, ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಖಾತೆ ಸಚಿವ, ಜೆ.ಪಿ.ನಡ್ಡಾ ತಿಳಿಸಿದ್ದಾರೆ. ವಿಶ್ವ ಆಹಾರ ಸುರಕ್ಷತಾ ದಿನದ ಹಿನ್ನೆಲೆ, ಬೆಂಗಳೂರಿನ ನಿಮ್ಹಾನ್ಸ್‌ನಲ್ಲಿ ಆಯೋಜಿಸಿದ್ದ, ಸುರಕ್ಷಿತ ಹಾಗೂ ಆರೋಗ್ಯಕರ ಆಹಾರದಿಂದ, ಸ್ಥೂಲಕಾಯ ನಿಗ್ರಹ ಕುರಿತ ಕಾರ್ಯಕ್ರಮದಲ್ಲಿ, ಪಾಲ್ಗೊಂಡು ಅವರು ಮಾತನಾಡಿದರು. 2050ರ ವೇಳೆಗೆ, ಜನಸಂಖ್ಯೆಯ ಶೇಕಡ ಮೂರನೇ ಒಂದರಷ್ಟು ಜನ, ಸ್ಥೂಲ ಕಾಯ ಸಮಸ್ಯೆಗೆ ಒಳಗಾಗಲಿದ್ದಾರೆ. ಸುರಕ್ಷಿತ ಹಾಗೂ ಪೌಷ್ಟಿಕಾಂಶ ಯುಕ್ತ ಆಹಾರ ಸೇವಿಸಿ, ಆರೋಗ್ಯ ಕಾಪಾಡಿಕೊಳ್ಳಲು ಆದ್ಯತೆ ನೀಡುವಂತೆ, ಅವರು ಕೋರಿದರು.

<><><>

**ಸೇವೆ, ಸುಶಾಸನ ಮತ್ತು ಬಡವರ ಕಲ್ಯಾಣದ ತತ್ವಗಳ** ಆಧಾರದ ಮೇಲೆ, ಭಾರತಸುದೃಢ ಹೆಜ್ಜೆಗಳನ್ನು ಇರಿಸಿ, ಕಳೆದ ಒಂದು ದಶಕದಲ್ಲಿ, ಹಲವು ಕ್ಷೇತ್ರಗಳಲ್ಲಿ ಗಣನೀಯ ಪರಿವರ್ತನೆಗಳನ್ನು ಸಾಧಿಸುವಲ್ಲಿ, ಯಶಸ್ವಿಯಾಗಿದೆ. ಕಳೆದ 11 ವರ್ಷಗಳಲ್ಲಿ, ಕೇಂದ್ರ ಸರ್ಕಾರ, ಪ್ರಮುಖ ಕ್ಷೇತ್ರಗಳಲ್ಲಿ ಸಾಧಿಸಿದ ವಿಶಿಷ್ಟ ಮೈಲುಗಲ್ಲುಗಳ ಕುರಿತು, ಆಕಾಶವಾಣಿಯ ಪ್ರಾದೇಶಿಕ ಸುದ್ದಿ ವಿಭಾಗ, ವಿಶೇಷ ಮಾಹಿತಿಯನ್ನು ನೀಡುತ್ತಿದೆ. ಮಧ್ಯಮ ವರ್ಗವನ್ನು ಸಬಲೀಕರಿಸುವ, ಹಣಕಾಸು ಸುಧಾರಣೆಗಳ ಬಗ್ಗೆ, ಇಂದಿನ ಈ ವರದಿ, ಕೇಂದ್ರೀಕರಿಸಿದೆ.

*****

***ತೆರಿಗೆ ಸುಧಾರಣೆ, ಸಾಮಾಜಿಕ ಭದ್ರತೆ ಮತ್ತು****ಕೌಶಲಾಭಿವೃದ್ಧಿ ಮೂಲಕ, ಮಧ್ಯಮ ವರ್ಗದ ಸಬಲೀಕರಣಕ್ಕಾಗಿ, ಕೇಂದ್ರ ಸರ್ಕಾರ, ಮಹತ್ವದ ಕ್ರಮ ಕೈಗೊಂಡಿದೆ.*

*ಕಳೆದ ಒಂದು ದಶಕಕ್ಕೂ ಹೆಚ್ಚು ಅವಧಿಯಲ್ಲಿ, ವಿಶೇಷ ಕ್ರಮಗಳ ಮೂಲಕ, ಮಧ್ಯಮವರ್ಗವನ್ನು ಹಣಕಾಸು ಸುಧಾರಣೆಗಳ ಮೂಲಕ ಸಬಲೀಕರಿಸಿ, ಭಾರತದ ಮಧ್ಯಮ ವರ್ಗವನ್ನು ಇಂದು, ರಾಷ್ಟ್ರದ ಅಭಿವೃದ್ಧಿಯ ಪಯಣದಲ್ಲಿ, ಕೇಂದ್ರ ಸ್ಥಾನದಲ್ಲಿರಿಸಿದೆ.*
***12 ಲಕ್ಷ ರೂಪಾಯಿಗಳ ವರೆಗೆ*** *ಆದಾಯ ತೆರಿಗೆಯನ್ನು, ಇತ್ತೀಚಿನ ಕೇಂದ್ರ ಬಜೆಟ್ ಮುಕ್ತಗೊಳಿಸಿ, ಆದಾಯ ತೆರಿಗೆ ರಿಟರ್ನ್ಸ್‌ಗಳು ಮತ್ತು ಅನುಸರಣೆಯನ್ನು ಸರಳ ಹಾಗೂ ಪಾರದರ್ಶಕಗೊಳಿಸಿದೆ.*

***25 ವರ್ಷಗಳ ಸೇವೆಯನ್ನು*** *ಪೂರ್ಣಗೊಳಿಸಿರುವ ಸರ್ಕಾರಿ ಉದ್ಯೋಗಿಗಳಿಗೆ, ಸರಾಸರಿ ಮೂಲ ವೇತನದ, ಶೇಕಡ 50 ರಷ್ಟು ಪಿಂಚಣಿಯನ್ನು, ಖಾತ್ರಿಪಡಿಸಲಾಗಿದೆ. ಏಕೀಕೃತ ಪಿಂಚಣಿ ಯೋಜನೆ ಜಾರಿಗೊಂಡಿದೆ.*

*ಈ ಮಧ್ಯೆ, ಕಳೆದ ದಶಕದಲ್ಲಿ, ಸರಾಸರಿ ಹಣ ದುಬ್ಬರ ದರವನ್ನು, ಶೇಕಡ 5ಕ್ಕೆ ನಿಯಂತ್ರಿಸಲಾಗಿದೆ. ಇದು ಹಿಂದಿನ 10 ವರ್ಷಗಳಿಗೆ ಹೋಲಿಸಿದರೆ, ಶೇಕಡ 8 ದಶಾಂಶ 2ಕ್ಕಿಂತ ಕಡಿಮೆಯಾಗಿದೆ.*

***ಪ್ರಧಾನಮಂತ್ರಿ ಕೌಶಲ ವಿಕಾಸ ಯೋಜನೆಯಡಿ,*** *1 ಕೋಟಿ 63 ಲಕ್ಷ ಯುವಜನತೆ ಉದ್ಯಮ ಸಂಬಂಧಿ ತರಬೇತಿ ಪಡೆದಿದ್ದಾರೆ. ರಾಷ್ಟ್ರೀಯ ಶಿಷ್ಯವೃತ್ತಿ ಪ್ರಚಾರ ಯೋಜನೆ, 2016 ರಿಂದ 40 ಲಕ್ಷಕ್ಕೂ ಹೆಚ್ಚು ಶಿಷ್ಯವೃತ್ತಿಗಳನ್ನು ವಿವಿಧ ಕೈಗಾರಿಕೆಗಳಲ್ಲಿ ನಿಯೋಜಿಸಲು ಅವಕಾಶ ಕಲ್ಪಿಸಿದೆ.*

***2014 ರಲ್ಲಿ ಸುಮಾರು*** *9 ಸಾವಿರದ 900 ರಷ್ಟಿದ್ದ ಕೈಗಾರಿಕಾ ತರಬೇತಿ ಸಂಸ್ಥೆಗಳ ಸಂಖ್ಯೆ, 2024 ರಲ್ಲಿ 14 ಸಾವಿರದ 600ಕ್ಕೆ ಏರಿಕೆಯಾಗಿದೆ.*

***ಈ ಪ್ರಯತ್ನಗಳು,*** *ದೇಶದ ಮಧ್ಯಮ ವರ್ಗವನ್ನು ಸಬಲೀಕರಿಸಿವೆ. ಸರ್ಕಾರದ ವಿಧಾನ, 'ನಾಗರಿಕರನ್ನು ಆಲಿಸಿ, ವ್ಯವಸ್ಥೆಯನ್ನು ಸರಳಗೊಳಿಸಿ ಮತ್ತು ಭರವಸೆಗಳನ್ನು ಈಡೇರಿಸಿ' ಎಂಬುದು ಸ್ಪಷ್ಟವಾಗಿದೆ.*

<><><>

**ಪರಿಸರ ನಿರ್ವಹಣೆ ಮತ್ತು** ನೀತಿ ಸಂಶೋಧನಾ ಸಂಸ್ಥೆ – ಎಂಪ್ರಿ, ಸ್ವಾಯತ್ತ ಸಂಸ್ಥೆಯಾಗಿದ್ದು, ಪರಿಸರ ಪೂರಕ ವಿ ʼಯಗಳ ಸಂಶೋಧನೆ ಹಾಗೂ ಅಧ್ಯಯನ, ವಿವಿಧ ತರಬೇತಿಗಳನ್ನು ಆಯೋಜಿಸಿ, ಪರಿಸರ ನಿರ್ವಹಣೆ ಹಾಗೂ ಸಂರಕ್ಷಣೆಗಾಗಿ ಶ್ರಮಿಸುತ್ತಿದೆ ಎಂದು, ಎಂಪ್ರಿ–ಯ ಹವಾಮಾನ ಬದಲಾವಣೆ ವಿಭಾಗದ ಹಿರಿಯ ಸಮಾಲೋಚಕಿ, ಸರಿತಾ ಬೋಯ ತಿಳಿಸಿದ್ದಾರೆ. ರಾಮನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ, ಹವಾಮಾನ ಬದಲಾವಣೆ ನಿರ್ವಹಣೆಯಲ್ಲಿ, ವಿವಿಧ ಇಲಾಖೆಗಳ ಪಾತ್ರ ಕುರಿತ, ತರಬೇತಿ ಕಾರ್ಯಾಗಾರ ಉದ್ಘಾಟಿಸಿ, ಮಾತನಾಡಿದರು. ಹವಾಮಾನ ಬದಲಾವಣೆ ನಿರ್ವಹಣೆ ಕುರಿತು, ಕರ್ನಾಟಕ ಕ್ರಿಯಾ ಯೋಜನೆ ಇದೆ. ವಿವಿಧ ಇಲಾಖೆಗಳ ಸಹಭಾಗಿತ್ವದಲ್ಲಿ, ಪರಿಣಾಮಕಾರಿ ಅನುಷ್ಠಾನಕ್ಕೆ ಆದ್ಯತೆ ನೀಡಲಾಗುತ್ತಿದೆ ಎಂದರು. ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿ ಹಾಗೂ ಅರಣ್ಯ ಇಲಾಖೆಯ ಸಿಬ್ಬಂದಿ ಪಾಲ್ಗೊಂಡಿದ್ದರು.

<><><>

**ಉಪ ರಾಷ್ಟ್ರಪತಿ ಜಗದೀಪ್ ಧನಕರ್, ರಾಜ್ಯ** ಭೇಟಿಗಾಗಿ, ನಿನ್ನೆ ಬೆಂಗಳೂರಿಗೆ ಆಗಮಿಸಿದ್ದಾರೆ. ಉಪ ರಾಷ್ಟ್ರಪತಿ ಅವರನ್ನು, ಎಚ್.ಎ.ಎಲ್. ವಿಮಾನ ನಿಲ್ದಾಣದಲ್ಲಿ, ರಾಜ್ಯಪಾಲ ಥಾವರಚಂದ್ ಗೆಹ್ಲೋಟ್ ಬರ ಮಾಡಿಕೊಂಡರು. ಉನ್ನತ ಶಿಕ್ಷಣ ಖಾತೆ ಸಚಿವ ಎಂ.ಸಿ.ಸುಧಾಕರ್, ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಸೇರಿದಂತೆ ಹಲವರು ಉಪಸ್ಥಿತರಿದ್ದರು.

<><><>

**ಮೆದುಳಿನ ಗಡ್ಡೆಗಳ ಬಗ್ಗೆ,** ಜನ ಜಾಗ್ರತಿ, ಸೂಕ್ತ ತಿಳಿವಳಿಕೆ ಹಾಗೂ ಸಕಾಲಿಕ ಚಿಕಿತ್ಸೆ ಬಗ್ಗೆ, ಮಾಹಿತಿ ಒದಗಿಸಲು, ಇಂದು, ವಿಶ್ವ ಬ್ರೇನ್ ಟ್ಯೂಮರ್ ಜಾಗ್ರತಿ ದಿನ ಆಚರಿಸಲಾಗುತ್ತಿದೆ.

<><><>

**'ಹೊಸ ಆಳಗಳನ್ನು, ಜಾಗ್ರತಗೊಳಿಸೋಣ'** ಎಂಬ ಧ್ಯೇಯದೊಂದಿಗೆ, ಇಂದು ವಿಶ್ವ ಸಾಗರ ದಿನಾಚರಣೆ. ಸಾಗರಗಳು, ಭೂಮಿಯ ಮೇಲಿನ ಪ್ರತಿ ಜೀವಿಯ ಅಸ್ತಿತ್ವಕ್ಕೆ ನೀಡುತ್ತಿರುವ, ಕೊಡುಗೆಗಳನ್ನು ಹಾಗೂ ಭೂ ಗ್ರಹದ ಶ್ವಾಸಕೋಶವಾಗಿ, ಪೋಷಿಸುವ ಪರಿಯನ್ನು, ಅರಿಯುವ ದಿನವಾಗಿದೆ.

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

- **ಬೆಂಗಳೂರಿನ, ಭಾರತೀಯ ತೋಟಗಾರಿಕೆ** ಸಂಶೋಧನಾ ಕೇಂದ್ರದಲ್ಲಿ, ಇಂದು, ವಿಕಸಿತ ಕೃಷಿ ಸಂಕಲ್ಪ ಅಭಿಯಾನ; ಶಿವರಾಜ್‌ಸಿಂಗ್ ಚೌಹ್ಞಾಣ್ ಭಾಗಿ.
- **ಮಹಾತ್ಮ ಗಾಂಧಿ ನರೇಗಾ ಯೋಜನೆ;** ಗುಲಾಬಿ ಕೃಷಿ ಕೈಗೊಂಡು, ಯಶಸ್ವಿಯಾದ, ಕೋಲಾರ ರೈತ, ರಾಘವೇಂದ್ರ.
- **ವಿಶ್ವ ಆಹಾರ ಸುರಕ್ಷತಾ ದಿನ;** ಆರೋಗ್ಯಕರ ಆಹಾರ ಸೇವನೆಗೆ ಆದ್ಯತೆ ನೀಡಲು, ಜೆ.ಪಿ. ನಡ್ಡಾ ಕರೆ.
- **ಕೇಂದ್ರ ಸರ್ಕಾರಕ್ಕೆ 11 ವರ್ಷಗಳು ಪೂರ್ಣ;** ಹಣಕಾಸು ಸುಧಾರಣೆಗಳ ಮೂಲಕ, ಮಧ್ಯಮ ವರ್ಗದ ಸಬಲೀಕರಣ, ಸಾಧನೆ.

<><><>